ಹೋಲಿಸಿದರೆ ಅವನು ತನಗಿಂತಲೂ ಎಷ್ಟೋ ಸುಂದರಾಂಗ. ತನ್ನದು ಸಾಧಾರಣ ರೂಪ, ಬಣ್ಣ. ಅವನೋ ಮೃದು ಭಾಷಿ. ತನಗೋ ಮಾತನಾಡುತ್ತಲೇ ಇರಬೇಕು. ಕಾಲೇಜಿನ ಅನೇಕ ಹುಡುಗಿಯರು ಅವನನ್ನು ಆರಾಧನಾ ಭಾವನೆಯಿಂದ ನೋಡುತ್ತಿರುವುದನ್ನು ತಾನು ಕಂಡಿದ್ದೇನೆ. ಆಗೆಲ್ಲ ಅವಳಿಗೆ ಹೆಮ್ಮೆಯಾಗುತ್ತಿತ್ತು. ಜಾತಿ, ಅಂತಸ್ತು ಎಲ್ಲವೂ ತನ್ನ ಮನೆತನಕ್ಕೆ ಹೇಳಿ ಇಟ್ಟ ಹಾಗಿದೆ. ಅವನ ಜಾಣ್ಮೆಗೆ ಕೆಲಸ ಸಿಗುವುದು ಸಮಸ್ಯೆಯಾಗಲಾರದು. ಮುಂದೆ ಓದುವ ಆಸೆ ಅವನಿಗೂ ಇದೆ. ಆದರೆ ನೌಕರಿಗೆ ಸೇರುವ ಅಗತ್ಯವೂ ಇದೆ. ಮನೆಯಲ್ಲಿ ಹಣದ ತಾಪತ್ರಯ ಇರಬಹುದು. ತಂಗಿಯನ್ನು ಓದಿಸಿ ಮದುವೆ ಮಾಡುವ ಜವಾಬ್ದಾರಿಯೂ ಇದೆಯಲ್ಲ?

ಹಣದ ತಾಪತ್ರಯ ತನ್ನ ಮನೆಯಲ್ಲೂ ಇದೆ. ಅಪ್ಪ, ಅಣ್ಣಂದಿರು ಮನೆಗೆ ತರುವ ಸಣ್ಣ ಸಣ್ಣ ಸಂಬಳ ಒಟ್ಟಾಗಿ ತಿಂಗಳ ಖರ್ಚು ಕಳೆದು ಸ್ವಲ್ಪ ಉಳಿತಾಯವೂ ಇದೆ. ತನ್ನ ಮನೆಯಲ್ಲಿ ದುಡಿಯುವ ಕೈಗಳು ಹೆಚ್ಚು. ತಾನು ಮುಂದೆ ಓದಲು ಬಯಸಿದರೆ ಯಾರೂ ವಿರೋಧಿಸಲಾರರು. ತನ್ನ ಜವಾಬ್ದಾರಿ ಕಳೆದ ಮೇಲೆಯೇ ಅಣ್ಣಂದಿರ ವಿವಾಹದ ಆಲೋಚನೆ. ಇದು ಅವಳಿಗೆ ಖಂಡಿತವಾಗಿ ತಿಳಿದಿದೆ.

ತಾನು ಒಪ್ಪಿದರೆ ಮನೆಯವರನ್ನು ಒಪ್ಪಿಸುವುದು ಕಷ್ಟವಲ್ಲ. ಶಶಿಕಾಂತನನ್ನು ಅವರೆಲ್ಲ ಚಿಕ್ಕಂದಿನಿಂದಲೂ ಬಲ್ಲರು. ಅವನು ಹೇಳಿದಂತೆ ಪದವಿ ಮುಗಿಸಿ ನೌಕರಿ ಸಿಕ್ಕಿದ ನಂತರ ವಿವಾಹವಾದರೆ ಮುಂದೆ ಹಣ ಒದಗಿ ಬಂದಂತೆ ತಾವಿಬ್ಬರೂ ಓದು ಮುಂದುವರಿಸಬಹುದು. ತನಗಿರುವ ಈ ಸಾಮಾನ್ಯ ರೂಪಕ್ಕೆ ಈತ ಕೇಳಿ ಬಂದದ್ದೇ ಹೆಚ್ಚು.

**ಈಗ ಮತ್ತೆ ಶಶಿಕಾಂತನ ಭೇಟಿ ಅವಳ ಶಾಂತವಾದ ಜೀವನ ಸಮುದ್ರದಲ್ಲಿ ದೊಡ್ಡ ಪ್ರಳಯಾಂತಕ ಅಲೆ ಎಬ್ಬಿಸಿದೆ. ಈತ ಯಾಕೆ ಇಲ್ಲಿಗೆ ಬಂದ? ತಾನು ಇಲ್ಲಿರುವುದು ಅವನಿಗೆ ತಿಳಿದಿತ್ತೇ? ಅವನ ಮಡದಿ ಏನಾದಳು? ಮಡದಿ ಮಕ್ಕಳಿದ್ದೂ ಇಲ್ಲಿಗೆ ಬರಬೇಕಾದ ಅನಿವಾರ್ಯತೆ ಈತನಿಗೆ ಹೇಗೆ ಬಂತು?**

ಸಂತೋಷ, ನಾಚಿಕೆಗಳಿಂದ ಮರುದಿನ ಅವನಿಗೆ ಮುಖ ಕೊಟ್ಟು ಮಾತನಾಡುವುದೂ ಸುಜಾತಾಳಿಗೆ ಕಷ್ಟವೆನಿಸಿತು. ಅವನಿಗೂ ಅವಳು ಬೇರೆಯೇ ಹುಡುಗಿಯಾಗಿ ಕಂಡಳು. ಆತನಂತೂ ಪೂರ್ತಿ ಕಂಗೆಟ್ಟು ಹೋಗಿದ್ದ. ತಾನು ಆತುರ ಪಟ್ಟೆನೇನೋ ಎಂದು ತನ್ನನ್ನೇ ಹಳಿದುಕೊಂಡ.

ಸಹಜ ಸ್ಥಿತಿಗೆ ತನ್ನನ್ನು ತಂದು ನಿಲ್ಲಿಸಿ ಸುಜಾತಾಳೇ ಅವನನ್ನು ಮಾತನಾಡಿಸಿ ಒಪ್ಪಿಗೆ ಕೊಟ್ಟಳು. ತನ್ನ ಅಪ್ಪ ಅಮ್ಮನನ್ನು ಮುಂದಿನ ವಿಚಾರದ ಬಗ್ಗೆ ಮಾತನಾಡಲು ಆತನ ಮನೆಗೆ ಕಳುಹಿಸುವುದಾಗಿಯೂ ಹೇಳಿದಳು.

ಮುಂದೆ ಎಲ್ಲವೂ ಕನಸಿನಂತೆ ನಡೆದು ಹೋಯಿತು. ಎರಡೂ ಮನೆಯಲ್ಲಿ ಸಂಭ್ರಮದ ವಾತಾವರಣ. ಪರೀಕ್ಷೆಯ ಫಲಿತಾಂಶ ಬರುವ ಮೊದಲೇ ಶಶಿಕಾಂತನಿಗೆ ದೂರದ ಪಟ್ಟಣದಲ್ಲಿ